**ದಿನಾಂಕಃ 25-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಪಾಟೀ ಸವಾಲುಃ ಶ್ರೀಮತಿ. ಜಿ.ಎಸ್. ವಕೀಲರಿಂದ 1, 2, 4, 5 ನೇ ಪ್ರತಿವಾದಿಯರ ಪರವಾಗಿಃ-***

ವಾದಿ ಮತ್ತು ಪ್ರತಿವಾದಿಯರು ಗೊತ್ತು. ಇವರು ಹೇಗೆ ಗೊತ್ತು ಎಂದರೆ ವಾದಿ ಮತ್ತು 2 ರಿಂದ 5 ನೇ ಪ್ರತಿವಾದಿಯರ ತಂದೆಯು ನಮ್ಮ ಇಲಾಖೆಯಲ್ಲಿ ನನ್ನ ಗುರುಗಳು ಆದ್ದರಿಂದ ಗೊತ್ತು. ವಾದಿ ಮತ್ತು 2 ರಿಂದ 4 ನೇ ಪ್ರತಿವಾದಿಯರ ತಂದೆಯು ಮತ್ತು ನಾನು ಸುಮಾರು 25 ವರ್ಷಗಳಿಂದ ಒಟ್ಟಿಗೆ ಕೆಲಸ ಮಾಡಿದ್ದೇವೆ. ನಾನು ಕಾನ್ಸ್ಟೇಬಲ್ ಮತ್ತು ಅವರು ಹೆಡ್ ಕಾನ್ಸ್ಟೇಬಲ್ ಆಗಿದ್ದರು. ನನಗಿಂತ ಸದರಿ ಕೆ.ಬೀಮೇಷಪ್ಪ ಸುಮಾರು 15 ವರ್ಷಗಳಷ್ಟು ಹೆಚ್ಚು ಹಿರಿಯರು. ನಾನು ಮತ್ತು ಅವರು ಒಂದೇ ಸ್ಟೇಷನ್ ನಲ್ಲಿ ಒಟ್ಟಿಗೆ ಕೆಲಸಮಾಡುತ್ತೇವೆ. ಈ ದಾವೆಯನ್ನು ವಾದಿ ವಿಜಯಲಕ್ಷ್ಮಿ ಆಸ್ತಿಯಲ್ಲಿ ಭಾಗ ಕೇಳಿ ಪ್ರತಿವಾದಿಯರ ವಿರುದ್ಧ ಹಾಕ್ಕಿದ್ದಾರೆ. ಆಸ್ತಿಯಲ್ಲಿ ಭಾಗ ಕೇಳುವ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 137 ರಲ್ಲಿ 34 ಎಕರೆ ಎನ್ನುತ್ತಾರೆ. ನಿಖರವಾಗಿ ಯಾವ ಆಸ್ತಿಗಳ ವಿರುದ್ದ ದಾವೆ ಸಲ್ಲಿಸಲಾಗಿದೆ ಎಂದು ಗೊತಿಲ್ಲ ಎಂದರೆ ಸಾಕ್ಷಿಯು ಕ್ರಮ ಸಂಖ್ಯೆ 4(3) ರ ಸ್ವತಿನ ಬಗ್ಗೆ ಮಾತ್ರ ಹೇಳಿರುತ್ತಾರೆ. ಜಮೀನುಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನಿಖರವಾಗಿ

ಹೇಳಲಾಗುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 5 ರವರ ತಂದೆ ಮತ್ತು 1 ನೇ ಪ್ರತಿವಾದಿಯರ ಗಂಡನ ಜಮೀನುಗಳು ಯಾವುದು ಎಂದೇ ಗೊತ್ತಿಲ್ಲ ಎಂದರೆ ಸರಿ. ಪ್ರತಿವಾದಿ 2 ರಿಂದ 5 ರವರ ತಂದೆ ಮತ್ತು 1 ನೇ ಪ್ರತಿವಾದಿಯರ ಗಂಡ ಭೀಮೇಶಪ್ಪ 2017 ರಲ್ಲಿ ಮರಣ ಹೊಂದಿರುತ್ತಾರೆ. 2 ರಿಂದ 5 ನೇ ಪ್ರತಿವಾದಿಯರು ಸುಮಾರು 25 ವರ್ಷಗಳಿಂದ ಬೇರೆಯಾಗಿ ತಮ್ಮ ತಮ್ಮ ಮನೆಯಲ್ಲಿ ವಾಸವಿದ್ದರೆ ಎಂದರೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಯರು ಒಕ್ಕಲುತನ ಮಾಡುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಯರು ಸ್ವಂತ ಆದಾಯ ಹೊಂದಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಸೇನೆಯಲ್ಲಿ ಇದ್ದರು ಎಂದರೆ ಸರಿ. 5 ನೇ ಪ್ರತಿವಾದಿಯು ಚಾಲಕ ವೃತ್ತಿ ಮಾಡುತ್ತಾನೆ ಎಂದರೆ ಸರಿ. 2 ರಿಂದ 5 ನೇ ಪ್ರತಿವಾದಿಯರು ತಮ್ಮ ಸ್ವಂತ ಗಳಿಕೆಯಿಂದ ದಾವ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ಕಲಮಗೇರ ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಯರು ರಾಯಚೂರಿನ ಅಲಿ ಕಾಲೋನಿಯಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಪ್ರತೇಕವಾಗಿ ಇದ್ದಾರೆ ಎಂದರೆ ಇಲ್ಲ 4 ನೇ ಪ್ರತಿವಾದಿಯೊಂದಿಗೆ ಇದ್ದಾರೆ ಎನ್ನುತ್ತಾರೆ. ದಾವ ಆಸ್ತಿಗಳು ಭೀಮೇಶಪ್ಪ ಖರೀದಿ ಮಾಡಿದ ಆಸ್ತಿಗಳು ಎಂಬುದು ಸುಳ್ಳು 2 ರಿಂದ 5 ನೇ ಪ್ರತಿವಾದಿಯರು ತಮ್ಮ ಸ್ವಂತ ಗಳಿಕೆಯಿಂದ ಗಳಿಸಿರುವುದು ಎಂದರೆ ಸರಿಯಲ್ಲ. ದಾವ ಆಸ್ತಿಗಳು 2 ರಿಂದ 5 ನೇ ಪ್ರತಿವಾದಿಯರ ಸ್ವಂತ

ಗಳಿಕೆಯಿಂದ ಖರೀದಿಸ್ಪಟ್ಟಿರುವುದರಿಂದ ಅವರವರ ಹೆಸರಿಗೆ ಖಾತೆಯಾಗಿದೆ ಎಂದರೆ ಗೊತ್ತಿಲ್ಲ. ವಾದಿಗೆ ಮತ್ತು 2 ಮತ್ತು 3 ನೇ ಪ್ರತಿವಾದಿಯರಿಗೆ ಮನಃ ಸ್ತಾಪವಿದ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವಂತೆ ಯಾವ ದಿನಾಂಕ ಮತ್ತು ದಿನ ಪಂಚಾಯಿತಿಗೆ ಸೇರಿಸಲಾಯಿತು ಎಂದು ಹೇಳಲಾಗುವುದೇ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 1 ರಿಂದ 5 ನೇ ಪ್ರತಿವಾದಿಯರೇ ಪಂಚಾಯಿತಿಗೆ ಹಿರಿಯರನ್ನು ಕೂರಿಸಿದ್ದರು ಆದರೆ ವಾದಿಯೇ ಹಿರಿಯರು ಮಾತನ್ನು ಕೇಳಿಲ್ಲ ಎಂದರೆ ಗೊತ್ತಿಲ್ಲ. ದಾವ ಆಸ್ತಿಗಳು 1 ರಿಂದ 5 ನೇ ಪ್ರತಿವಾದಿಯರ ಸ್ವಂತ ಆಸ್ತಿಗಳು, ಅವುಗಳಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆಯನ್ನು ನಾನು ನೊಡಿರುತ್ತೇನೆ, ನಾನು 1998 ರಲ್ಲಿ ಅವರ ಮನೆಗೆ ಹೋಗಿದೆ. ನಾನು ಪ್ರತಿವಾದಿಯರ ಜಮೀನಿಗೆ ಮತ್ತು ಮನೆಗೆ ಹೋಗಿಯೇ ಇಲ್ಲ, ವಾದಿಯ ಮಾತು ಕೇಳಿ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಏನು ಬರೆದಿದೆ ಎಂದು ಗೊತೇ ಎಂದರೆ ಸಾಕ್ಷಿಯು ಗೊತ್ತು ಎನ್ನುತ್ತಾರೆ. ಈದಿನ ವಿಜಯಲಕ್ಷ್ಮಿಯೇ ನನ್ನನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ದಾವ ಆಸ್ತಿಗಳನ್ನು ನಿಖರವಾಗಿ ಹೇಳಲು ಗೊತ್ತಿಲ್ಲ, ಆದರೂ ವಾದಿಪರ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವ ಆಸ್ತಿಗಳಲ್ಲಿ ಹಕೇ ಇಲ್ಲ ಎಂದರೆ ಸರಿಯಲ್ಲ.

ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಶ್ರೀ ಕೆ.ಎಸ್.ಪಿ. ಪರವಾಗಿ ಎಸ್.ಜಿ.ಎನ್. ರವರು 1, 2, 4 ಮತ್ತು 5 ನೇ ಪ್ರತಿವಾದಿಯರ ಪಾಟೀ ಸವಾಲನೇ ಅನುಕರಿಸುವುದಾಗಿ ತಿಳಿಸಿರುತ್ತಾರೆ, ಆದ್ದರಿಂದ ಆ ರೀತಿ ಅನುಕರಿಸಿದ್ದಾರೆ ಎಂದು ಪರಿಗಣಿಸಿದೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**